ಕರ್ನಾಟಕವಿಧಾನಪರಿಷತ್ತು

| | |
|---|---|
| ಚುಕ್ಕೆರಹಿತಪ್ರಶ್ನೆಸಂಖ್ಯೆ | 449(594) |
| ವಿಧಾನಪರಿಷತ್ತಿನಸದಸ್ಯರು | ಶ್ರೀಚಿದಾನಂದ ಎಂ.ಗೌಡ (ಪದವೀದರರ ಕ್ಷೇತ್ರ) |
| ಉತ್ತರಿಸಬೇಕಾದಸಚಿವರು | ಮಾನ್ಯಮುಖ್ಯ ಮಂತ್ರಿಗಳು |
| ಉತ್ತರಿಸುವದಿನಾಂಕ | 20.08.2026 |

| ಕ್ರಸಂ | ಕೋರಿದಮಾಹಿತಿ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರಿ ನೌಕರರಿಗೆ ಸ್ಯಾಲರಿ ಪ್ಯಾಕೇಜ್‌ನಡಿಯಲ್ಲಿ ಅಕೌಂಟ್‌ನಲ್ಲಿ ಸಿಗುತ್ತಿರುವ ಸೌಲಭ್ಯಗಳೇನು: ಬ್ಯಾಂಕ್‌ವಾರು ವಿವರ ನೀಡುವುದು) | ಅನೇಕ ಬ್ಯಾಂಕುಗಳು ಸರ್ಕಾರಿ ನೌಕರರನ್ನು ಆಕರ್ಷಿಸಲು ಅತ್ಯಂತ ಆಕರ್ಷಕವಾದ"ಸಂಬಳ ಪ್ಯಾಕೇಜ್‌ಗಳನ್ನು" (Salary Packages) ನೀಡುತ್ತಿವೆ. ಈ ಪ್ಯಾಕೇಜ್‌ಗಳ ಅಡಿಯಲ್ಲಿ ಉಳಿತಾಯ ಖಾತೆಗಳನ್ನು (Savings Bank Accounts) ತೆರೆಯುವ ನೌಕರರಿಗೆ ವಿವಿಧ ರೀತಿಯ ರಿಯಾಯಿತಿಗಳನ್ನು ಹಾಗೂ ಅವರ ಕುಟುಂಬದ ಸದಸ್ಯರಿಗೆ ಹೆಚ್ಚುವರಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br><br>ಸಂಬಳ ಪ್ಯಾಕೇಜ್‌ಗಳಲ್ಲಿ ಬ್ಯಾಂಕುಗಳು ಈ ಕೆಳಗಿನ ಸೌಲಭ್ಯಗಳನ್ನು ಒದಗಿಸುತ್ತಿವೆ:<br>• ಉಳಿತಾಯ ಖಾತೆಯಲ್ಲಿ ಕನಿಷ್ಠ ಬಾಕಿ ಮೊತ್ತವನ್ನು (Minimum Balance) ಕಾಯ್ದುಕೊಳ್ಳಬೇಕಾದ ನಿಯಮದಿಂದ ಸಂಪೂರ್ಣ ವಿನಾಯಿತಿ.<br>• ನೌಕರನ 2 ರಿಂದ 3 ತಿಂಗಳ ನಿವ್ವಳ ಸಂಬಳದಷ್ಟು ಮೊತ್ತವನ್ನು ಓವರ್‌ಡ್ರಾಫ್ಟ್ (Overdraft - ಹೆಚ್ಚುವರಿ ಸಾಲ) ರೂಪದಲ್ಲಿ ಪಡೆಯುವ ಸೌಲಭ್ಯ.<br>• ಗೃಹ ಸಾಲಗಳ (Housing Loans) ಮೇಲಿನ ಬಡ್ಡಿದರದಲ್ಲಿ ವಿಶೇಷ ರಿಯಾಯಿತಿ.<br>• ಉಚಿತ ನೆಫ್ಟ್ (NEFT) / ಆರ್.ಟಿ.ಜಿ.ಎಸ್ (RTGS) ವರ್ಗಾವಣೆಗಳು, ಉಚಿತ ಡಿಮ್ಯಾಂಡ್ ಡ್ರಾಫ್ಟ್‌ಗಳು (DD), ಉಚಿತ ರುಪೇ ಡೆಬಿಟ್ ಕಾರ್ಡ್ (RuPay Debit Card), ಕ್ರೆಡಿಟ್ ಕಾರ್ಡ್ ವಿಮೆ ಮತ್ತು ಲಗೇಜು ವಿಮೆ (Baggage Insurance) ಸೌಲಭ್ಯಗಳು.<br>• ಬ್ಯಾಂಕಿನ ಲಾಕರ್ ಬಾಡಿಗೆಯ (Locker Rent) ಮೇಲೆ ವಿಶೇಷ ರಿಯಾಯಿತಿ, ಇತ್ಯಾದಿ.<br>• ಇದರ ಜೊತೆಗೆ, ಈ ಮೇಲಿನ ಸೌಲಭ್ಯಗಳಲ್ಲದೆ 'ಸಂಬಳ ಪ್ಯಾಕೇಜ್' (Salary Package) ಖಾತೆಗಳ ಅಡಿಯಲ್ಲಿ ನೌಕರರಿಗೆಯಾವುದೇ ಹೆಚ್ಚುವರಿ ವೆಚ್ಚವಿಲ್ಲದೆ (Free of Cost) ಲಕ್ಷಾಂತರ ರೂಪಾಯಿ ಮೌಲ್ಯದ ಉಚಿತ ವೈಯಕ್ತಿಕ ಅಪಘಾತ ವಿಮೆ, ಅವಧಿ ವಿಮೆ (Term Insurance), ಸೌಲಭ್ಯಗಳನ್ನು ನೀಡುತ್ತಿವೆ.ನೌಕರರ ಸಂಬಳದ ಖಾತೆಯ ಶ್ರೇಣಿ ಅಥವಾ ಯೋಜನೆಗಳಿಗೆ ಅನುಗುಣವಾಗಿ ವಿಭಿನ್ನ ಪ್ಲಾನ್‌ಗಳಡಿ ಉಚಿತವೈಯಕ್ತಿಕ ಅಪಘಾತ ವಿಮೆ (Personal Accident Insurance - PAI) ರಕ್ಷಣೆಯನ್ನು ಸಹ ನೀಡುತ್ತಾರೆ.<br>(ದಯವಿಟ್ಟು ಗಮನಿಸಿ:ಈ ಮೇಲಿನ ಸೌಲಭ್ಯಗಳು ಬ್ಯಾಂಕಿನಿಂದ ಬ್ಯಾಂಕಿಗೆಬದಲಾಗಬಹುದು.)<br><br>ಸ್ಯಾಲರಿ ಪ್ಯಾಕೇಜ್‌ನಡಿಯಲ್ಲಿ ನೋಂದಾವಣಿ ಮಾಡಿಕೊಳ್ಳಲು ಅಧಿಕಾರಿ/ನೌಕರರು ಬ್ಯಾಂಕುಗಳಿಗೆ ಅರ್ಜಿ ಸಲ್ಲಿಸಬೇಕಾಗುತ್ತದೆ.<br><br>ಸ್ಯಾಲರಿ ಪ್ಯಾಕೇಜ್‌ನಡಿಯಲ್ಲಿ ನೀಡುತ್ತಿರುವ ವಿಮಾ ಸೌಲಭ್ಯಗಳ ಬಗ್ಗೆ ಬ್ಯಾಂಕುವಾರುಮಾಹಿತಿಯನ್ನು ಅನುಬಂಧ -1ರಲ್ಲಿ ಸಲ್ಲಿಸಿದೆ. |

**ಆ)** ಎಷ್ಟು ಜನ ಸರ್ಕಾರಿ ನೌಕರರು ಸ್ಯಾಲರಿ ಪ್ಯಾಕೇಜ್ ಸೌಲಭ್ಯಕ್ಕಾಗಿ, ನೋಂದಾಯಿಸಿಕೊಂಡಿದ್ದಾರೆ: ಸ್ಯಾಲರಿ ಪ್ಯಾಕೇಜ್ ಆಯ್ಕೆ ಮಾಡಿಕೊಂಡ ನಂತರ ಇಲ್ಲಿವರೆಗೆ ಎಷ್ಟು ಜನ ಅಧಿಕಾರಿ ನೌಕರರೂ ಮೃತ ಪಟ್ಟಿದ್ದಾರೆ ಅವರಿಗೆ ಬ್ಯಾಂಕ್ ವತಿಯಿಂದ ನೀಡಿದ ಪರಿಹಾರವೆಷ್ಟು:

ಸದರಿ ಯೋಜನೆಯಡಿಯಲ್ಲಿ ದಿನಾಂಕ:14.08.2026ರ ವರೆಗೆ ನೋಂದಣಿಯಾದ ಸರ್ಕಾರದ ಅಧಿಕಾರಿ/ನೌಕರರ ಮಾಹಿತಿಯು (HRMS-2 ರವರು ನೀಡಿರುವ ಮಾಹಿತಿಯಂತೆ) ಈ ಕೆಳಗಿನಂತಿದೆ:

ಸಂಬಳ ಪ್ಯಾಕೇಜ್ ಅಡಿಯಲ್ಲಿ [illegible] (ದಿನಾಂಕ: 14.08.2026 ರವರೆಗೆ)

| | ಎ ಗುಂಪು | ಬಿ ಗುಂಪು | ಸಿ ಗುಂಪು | ಡಿ ಗುಂಪು | ಒಟ್ಟು |
|---|---|---|---|---|---|
| ನೌಕರರು | 24926 | 33850 | 406456 | 30601 | 499111 |
| **ನೋಂದಣಿಯಾದವರು** | **19717** | **25395** | **194739** | **16211** | **257492** |
| **ನೋಂದಣಿಯಾದವರ % ವ್ಯಾಪ್ತಿ** | **79%** | **75%** | **48%** | **53%** | **52%** |
| ನೋಂದಣಿ ಮಾಡಿಕೊಳ್ಳಬೇಕಾದವರು | 5209 | 8455 | 211717 | 14390 | 241619 |
| ನೋಂದಣಿ ಮಾಡಿಕೊಳ್ಳಬೇಕಾದವರ % ವ್ಯಾಪ್ತಿ | 21% | 25% | 52% | 47% | 48% |

ಸ್ಯಾಲರಿ ಪ್ಯಾಕೇಜ್ ಸೌಲಭ್ಯ ನೀಡುತ್ತಿರುವ ಬ್ಯಾಂಕುಗಳು ಸಲ್ಲಿಸಿದ ಮಾಹಿತಿಯು ಈ ಕೆಳಗಿನಂತಿದೆ:

| ಸರ್ಕಾರಿ ನೌಕರರು ಮತ್ತು ನಿಗಮ ಮಂಡಳಿಗಳ ನೌಕರರು ಸೇರಿ ಒಟ್ಟು ನೋಂದಣಿ | ಸ್ವೀಕರಿಸಿದ ಕ್ಲೇಮುಗಳು | ಪಾವತಿಸಿದ ಕ್ಲೇಮು ಮೊತ್ತ ರೂ ಲಕ್ಷಗಳಲ್ಲಿ |
|---|---|---|
| 4,80,452 | 548 | 7,351 |

**ಇ)** ಸರ್ಕಾರ ಎಂ ಓ ಯು ಮಾಡಿಕೊಂಡಲ್ಲಿ ಕೆಲವು ಬ್ಯಾಂಕ್‌ಗಳು ನೌಕರರಿಗೆ 5 ರಿಂದ 10 ಲಕ್ಷಗಳ ಉಚಿತ ಟರ್ಮ್ ವಿಮೆ ನೀಡುತ್ತಿದ್ದು, (ಅಪಘಾತ ವಿಮೆ ಹೊರತುಪಡಿಸಿ) ರಾಜ್ಯ ಸರ್ಕಾರ ಯಾವ ಬ್ಯಾಂಕ್ ನೊಂದಿಗೆ ಎಂ ಓ ಯು ಮಾಡಿಕೊಂಡಿದೆ ಮಾಡಿಕೊಳ್ಳದೆ ಇದ್ದಲ್ಲಿ ಇದಕ್ಕೆ ಕಾರಣಗಳೇನು ಎಂ.ಓ.ಯು ಮಾಡಿಕೊಳ್ಳುವ ಮೂಲಕ ಎಲ್ಲರಿಗೂ ಉಚಿತ ಟರ್ಮ್ ವಿಮೆ ಸೌಲಭ್ಯ ವಿಮೆ ಸೌಲಭ್ಯ ನೀಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು:

ರಾಜ್ಯದಲ್ಲಿ ಸರ್ಕಾರಿ ನೌಕರರಿಗಾಗಿ ಸ್ಯಾಲರಿ ಪ್ಯಾಕೇಜ್ ಯೋಜನೆಯನ್ನು ಕೊಡಮಾಡಿರುವ ಬ್ಯಾಂಕುಗಳಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಪಂಜಾಬ್ ಅಂಡ್ ಸಿಂಧ್ ಬ್ಯಾಂಕ್ ಮತ್ತು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಪ್ರಮುಖವಾಗಿವೆ. ಈ ಬ್ಯಾಂಕುಗಳ ಪೈಕಿ ಬ್ಯಾಂಕ್ ಆಫ್ ಬರೋಡಾ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಪಂಜಾಬ್ ಅಂಡ್ ಸಿಂಧ್ ಬ್ಯಾಂಕ್ ಟರ್ಮ್ ವಿಮೆಯನ್ನು ಯಾವುದೇ ಒಡಂಬಡಿಕೆ ಪತ್ರ (MoU) ಇಲ್ಲದೆ ನೀಡುತ್ತಿರುವರು. ಭಾರತೀಯ ಸ್ಟೇಟ್ ಬ್ಯಾಂಕ್ ಮಾತ್ರ ಎಲ್ಲಾ ಸರ್ಕಾರಿ ನೌಕರರಿಗೆ ರೂ. 10.00 ಲಕ್ಷ ಅವಧಿ ವಿಮೆ (Term Insurance) ನೀಡಲು ಮುಂದಾಗಿದ್ದು, ಒಡಂಬಡಿಕೆ ಪತ್ರ (MoU) ಅವಶ್ಯವೆಂದು ತಿಳಿಸಿರುತ್ತಾರೆ ಮತ್ತು ಅದಕ್ಕಾಗಿ ಸರ್ಕಾರದ ಎಲ್ಲಾ ನೌಕರರ ಸಂಬಳ ಮತ್ತು ಇನ್ನಿತರೆ ವಿವರಗಳನ್ನು ಪ್ರತಿ ತಿಂಗಳು ಸಲ್ಲಿಸಬೇಕೆಂಬ ಷರತ್ತನ್ನು ವಿಧಿಸಿರುವರು. ಎಲ್ಲಾ ಸರ್ಕಾರಿ ನೌಕರರ ಸಂಬಳದ ವಿವರಗಳನ್ನು ನೀಡುವುದು, ವೈಯಕ್ತಿಕ ಗೌಪ್ಯತೆಯ ದೃಷ್ಟಿಯಿಂದ ಸಾಧು ಅಲ್ಲವೆಂದು ತೀರ್ಮಾನಿಸಲಾಗಿದೆ. ಆದ್ದರಿಂದ, ಅನೇಕ ಬಾರಿ ವಿವಿಧ ಹಂತಗಳಲ್ಲಿ ಸದರಿ ವಿಷಯವನ್ನು ಚರ್ಚಿಸಲಾಗಿದ್ದು, ಸರ್ಕಾರದ ಎಲ್ಲಾ ನೌಕರರ ಸಂಬಳ ಮತ್ತು ಇನ್ನಿತರೆ ವಿವರಗಳನ್ನು ಸರ್ಕಾರದಿಂದ ಕೋರದೆ, ಒಡಂಬಡಿಕೆ ಪತ್ರ (MoU) ಮಾಡುವ ಬಗ್ಗೆ, ಸದರಿ ಬ್ಯಾಂಕಿನವರು ತಮ್ಮ ಪ್ರಧಾನ ಕಚೇರಿಯೊಂದಿಗೆ ಪತ್ರ ವ್ಯವಹಾರಗಳನ್ನು ನಡೆಸಿರುವುದಾಗಿ ತಿಳಿಸಿರುವರು ಮತ್ತು ಅಂತಿಮ ನಿರ್ಧಾರವನ್ನು ಸದ್ಯದಲ್ಲಿಯೇ ತಿಳಿಸುವುದಾಗಿ ಹೇಳಿರುವರು. ಸದರಿ ವಿಷಯದ ಬಗ್ಗೆ, ಬ್ಯಾಂಕು ಒಪ್ಪಿಗೆ ನೀಡಿದಲ್ಲಿ ಸರ್ಕಾರವು ಒಡಂಬಡಿಕೆ ಪತ್ರ (MoU) ಮಾಡಿಕೊಳ್ಳುವ ಮೂಲಕ ಸದರಿ ಬ್ಯಾಂಕಿನಲ್ಲಿ ಸಂಬಳ ಪಡೆಯುತ್ತಿರುವ ಮತ್ತು ಸ್ಯಾಲರಿ ಪ್ಯಾಕೇಜಿನಲ್ಲಿ ನೋಂದಣಿ ಮಾಡಿಕೊಂಡ ನೌಕರರಿಗೆ ಉಚಿತ ಟರ್ಮ್ ವಿಮೆ ಸೌಲಭ್ಯ ಒದಗಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

**ಸಂಖ್ಯೆ: ಎಫ್‌ಡಿ-ಸಿಎಂ/ 45/2026**

(ಡಿ.ಕೆ.ಶಿವಕುಮಾರ್)
ಮುಖ್ಯಮಂತ್ರಿ.

# ಅನುಬಂಧ-1

**Comparative features of State Government Salary Package Scheme of Banks** (Rs in lakhs)

| Bank | Basis | Category / Salary limit (in Rs) | Term Insurance Cover | Accident Insurance Cover | Air Accident Insurance Cover | Hospitalisation | Additional Cover for Death on Duty | Accident-PTD | Anti Terrorist & Naxalite Operations Cover | Additional Offerings | Employees Covered | No of Claims Reported | Claim Amount Settled in Lakhs |
|---|---|---|---|---|---|---|---|---|---|---|---|---|---|
| State Bank of India (wef 04.11.2025) | Net Salary | All | | 100 | 160 | | | | | Additional Accidental Cover of Rs.10 Lakh under RuPay Select Card & Rs 2 Lakhs under Rupay Platinum available | 320237 | 25-26 - 21 Claims | 461 |
| | | | | | | | | | | | | 26-27 - 15 Claims | 497 |
| Canara Bank | Gross Salary | < 50000 | 2 | 50 | 50 | | | 50 | | Add on benefits : Death in come - Rs 5 Lakh ; Ambulance charges - Rs.15,000/- ; Higher Education benefit - Rs 5 Lakh ; Girl child cover (for one child marriage) - Rs. 5 lakh | 76131 | 390 (out of which 289 claims are settled) claims in proces 101 (Rs. 26.96 cr) | 3182 |
| | | 50000-100000 | 6 | 100 | 100 | | | 50 | | | | | |
| | | 100000-150000 | 10 | 100 | 100 | | | 100 | | | | | |
| | | > 150000 | 10 | 100 | 100 | | | 100 | | | | | |
| Bank of Baroda | Gross Salary | > 20,000 | 10 | 100 | 100 | 0.30 | 25 | | | Addln cover of Rs.10 Lakh for marriage of Daughter & Rs.10 lakhs for Higher Eduction | 17457 | 101 | 1941 |
| | | | | | | | | | | 42881 (under 4 seperate MoUs with Forest, Police Kollegal Teachers & BMTC) | 42881 (under 4 seperate MoUs ) | | |
| Union Bank of India | Gross Salary | 25000-74999 | 5 | 100 | 100 | 0.30 | | | | PAI addon benefits upto Rs.16.40 lakh | 8595 | | |
| | | > 75000 | 10 | 100 | 100 | 0.30 | | | | | 22819 (under seperate MoUs with BESCOm & KPTCL) | 21 | 1270 |
| Punjab National Bank | Gross Salary | 10000-25000 | 0 | 30 | 60 | 0.30 | | | | Addln cover of Rs.10 Lakh for marriage of Daughter & Rs.5 lakhs for Higher Education | | | |
| | | 25001-75000 | 2 | 50 | 100 | 0.30 | | | | | | | |
| | | 75001-150000 | 5 | 100 | 200 | 0.60 | | | | | | | |
| | | > 150001 | 8 | 125 | 250 | 0.60 | | | | | | | |
| Punjab & Sind Bank | Gross Salary | >70000 - 125000 | 0 | 75 | | 0 | | 120 | 75 | Top-Up Health Insurance Cover at additional premium - Rs.50 lakh | | | |
| | | 125000-200000 | 20 | 350 | | 0.50 (Max) | | 400 | 350 | | | | |
| | | >200000 | 20 | 350 | | 0.50 (Max) | | 400 | 350 | | | | |
| Apex Bank | Gross Salary | <50000 | | 10 | | | | | | | 1372 | No information on Death of employees | |
| | | 50000-100000 | | 20 | | | | | | | | | |
| | | > 100000 | | 25 | | | | | | | | | |
| Total | | | | | | | | | | | 489492 | 548 | 7351 |